> ರಚನೆ ಅರ್ಥಮಾಡಿಕೊಳ್ಳೋದು ಗೊತ್ತಾಯ್ತು ಅಂತಂದ್ರ ಪಠ್ಯವನ್ನ ಸರಳವಾಗಿ ತಲುಪಿಸಲಿಕ್ಕ ಸಾಧ್ಯ ಆಗ್ತದ. ಹಾಡು ಅಂದ್ರ ಏನು? ಪಲ್ಲವಿ ಅಂದ್ರ ಏನು? ಸಾಲ ಅಂದ್ರ ಏನು?

ಮಾಡಿದ್ರು ಅಂದ್ರ 1973ರ ಫೆಬ್ರುವರಿ, ಮಾರ್ಚ್ ಇರಬಹುದು, ಬೆಟಗೇರಿ ಕೃಷ್ಣಶರ್ಮ ಅವರಿಗಿ ಕರೆಸಿದ್ರು. ದೊಡ್ಡ ವಿಚಾರ ಸಂಕಿರಣ ಮಾಡಿದ್ರು. ಕಲಬುರಗಿ ಒಳಗ ನಡೆದ ಜಾನಪದದ ಕುರಿತು ಮೊದಲ ದೊಡ್ಡ ವಿಚಾರ ಸಂಕಿರಣವಿದು. ಬೆಟಗೇರಿಯವರಿಗಿ ಭಾಳ ವಯಸ್ಸಾಗಿತ್ತು. ಆದ್ರ ಅವರ ಧ್ವನಿ ಮಾತ್ರ ಅದ್ಭುತ. ಕೈದಾಗ ಚೀಟಿಲ್ಲ ಚಿಪಾಟಿಲ್ಲ. ಮೂರು ಉಪನ್ಯಾಸಗಳು ಜಾನಪದದ ಮ್ಯಾಲ ಕೊಟ್ರು. ಒಂದು ಕಥಿ ಬಗ್ಗೆ, ಇನ್ನೊಂದು ಬಯಲಾಟ, ಆಮ್ಯಾಲ ಮತ್ತೊಂದು ಉದ್ಘಾಟನೆಯ ವಿಶೇಷ ಉಪನ್ಯಾಸ. ಭಾಳ ಸರಳವಾಗಿ ಜಾನಪದದ ಮ್ಯಾಲ ಮಾತಾಡಿದ್ರು. ಇದೆಲ್ಲ ನನ್ನ ಮ್ಯಾಲ ಪರಿಣಾಮ ಬೀರಿದವು. ನನ್ನ ಜೀವನದಲ್ಲಿ ನಾನು ನೋಡಿದ ಮೊದಲ ದೊಡ್ಡ ವಿಚಾರ ಸಂಕಿರಣ ಅದು. ಜಾನಪದದ ಬಗ್ಗೆ ಅಧ್ಯಯನ ಮಾಡಬಹುದು ಅಂತನ್ನಿಸ್ತು. ಆವಾಗ ನಾನು ಬಿ.ಎ. ಓದ್ತಿದ್ದೆ. ಬಿ.ವಿ. ಮಲ್ಲಾಪುರ ಸರ್, ಎಸ್.ಎಸ್. ಬಾಣದ ಸರ್ ಅವರು ವಿಚಾರ ಸಂಕಿರಣಕ್ಕ ಕರ್ಕೊಂಡು ಹೋಗಿದ್ರು.

ಇಲ್ಲಿ ಎಂ.ಎ ಮಾಡ್ಲಿಕ್ಕ ಬಂದಾಗ ಹೆಂಡಿ ಸರ್, ಲಠ್ಠೆ ಸರ್, ಬಿರಾದಾರ ಸರ್ ಪಾಠ ಹೇಳೋರು. ಅದ್ಭುತ ಪಾಠ ಮಾಡೋರು. ಬಿ.ವಿ. ಮಲ್ಲಾಪೂರ ಸರ್ ಕೂಡಾ ಬರ್ತಿದ್ರು. ಮಲ್ಲಾಪೂರ ಅವರಿಗೆ ಭಾಳ ಛಂದ ಬಯಲಾಟದ ಹಾಡು ಬರ್ತಿದ್ವು. ಈ ನಾಲ್ಕು ಮಂದಿ ಮುಖ್ಯವಾಗಿ ಜಾನಪದ ಬಗ್ಗೆ ಪಾಠ ಮಾಡ್ತಿದ್ರು. ನಮಗೆಲ್ಲ ಮುಂದೆ ಬೆಳೀಲಿಕ್ಕೆ ಕಾರಣ ಅಂದ್ರ ಶಾಸ್ತ್ರೀಯ ಅಧ್ಯಯನದ ಒಂದು ಶಿಸ್ತು. ಹೆಂಡಿಯವರು ಇಲ್ಲಿಗೆ ಬರೋ ಮುಂಚೇನೆ 'ಕಲಬುರಗಿ ಜಿಲ್ಲೆಯ ಜನಪದ ಸಂಗ್ರಹ ಸಂಪಾದನೆ ಪ್ರಕಟಣೆ' ಎನ್ನುವ ಸಣ್ಣ ಯೋಜನೆಯನ್ನು ತಗೊಂಡೆ ಬಂದಿದ್ರು. ಹತ್ತು ಸಾವಿರ ರೂಪಾಯಿ ಯೋಜನೆ ಅದು. ಯಾರ್‍ಯಾರ್ ಹುಡುಗ್ರಿಗೆ ಆಸಕ್ತಿ ಅದನೊ ಅವ್ರಿಗೆಲ್ಲ ಕರೆಸಿ ಸಂಗ್ರಹ ಮಾಡ್ಲಿಕ್ಕ ಹಚ್ಚಿದ್ರು. ನಾನೂ ಸಂಗ್ರಹ ಮಾಡ್ಕೊಂಡು ಬಂದೆ. ನಮಗ ಇದೆಲ್ಲ ಏನೋ ಹೊಸದು ಅನಿಸ್ತಿದ್ದಿಲ್ಲ. ಯಾಕಂದರ ಹಳ್ಳಿಯಿಂದ ಬಂದ ನನಗ ಏನ್ ಚಟ ಇತ್ತು ಅಂದ್ರ ಈ ಹಂತಿ ಹಾಡುಗಳ ಚೌಪಡಿಗಳನ್ನ ಮಾಡಿಟ್ಕೊಳ್ಳೋದು. ನನ್ನ ಬಳಿ ಗಾದೆ ಮಾತುಗಳ ಚೌಪಡಿಗಳಿದ್ದವು. ಭಜನೆ ಹಾಡು ಬರಕೊಂಡ ಚೌಪಡಿಗಳಿದ್ದವು. ಸಾರಥಿ ಮಾತುಗಳು ಇತ್ಯಾದಿ. ಲಠ್ಠೆಯವರು ಇಲ್ಲಿಗೆ ಬಂದಾಗ ಅವರ ಹೆಸರಲ್ಲಿ ಯಾವ ಪುಸ್ತಕಗಳು ಇದ್ದಿಲ್ಲ. ಹೆಂಡಿಯವರು ಲಠ್ಠೆ ಅವರಿಗೆ ಸಂಗ್ರಹ ಮಾಡಾಕ ಹೇಳಿದ್ರು. ಅವರು ಏಕದಂ ಸಂಗ್ರಹಕ್ಕ ತೊಡಿಗಿಸಿಕೊಂಡ್ರು. ಗಾದೆಗಳು, ಒಗಟುಗಳು, ಒಡಪುಗಳು ಮೂರು ಸಂಗ್ರಹಗಳು ಚಾಲು ಮಾಡಿಬಿಟ್ರು. ನನಗೂ ಕರೆದು ಮಾತಾಡಿಸಿದ್ರು. ಅವಾಗೆಲ್ಲ ಮಾಸ್ತರಗೋಳು ಗುರ್ತು ಹಿಡಿದು ಮಾತಾಡಿಸ್ತಾರಂದ್ರ ಅದೇ ನಮಗ ದೊಡ್ಡ ಭಾಗ್ಯ. ಒಂದೆರೆಡು ಸಲ ಮನೆಗೂ ಕರೆದ್ರು. ಇದೆಲ್ಲ ಹೆಂಗ್ ಸಂಗ್ರಹ ಮಾಡ್ಬೇಕಂತ ಕಲಿಸಿದ್ರು.

ಶಾಂತಪ್ಪ ಬೂದಿಹಾಳು, ಶಂಕರಗೌಡ ಬಿರಾದಾರ, ಸೂಗಯ್ಯ ಹಿರೇಮಠ ಮತ್ತು ನಾನು ಇದ್ವಿ. 1973ರಿಂದ ಇಲ್ಲಿ ಒಂದು ವಾತಾವರಣ ಚಾಲೂ ಆಯ್ತು. ಪ್ರಾರಂಭದೊಳಗ ನಾವು ನೀವು ಏನು ಹಳ್ಳಿಯೊಳಗ ಬೆಳೆದವರು ಇರ್ತಿವಲ್ಲ ಆ ನಾಲೇಜ್ ಪ್ಯಾಟೆದೊಳಗ ಬೆಳೆದವರಿಗೆ ಇರೋದಿಲ್ಲ. ನಾವು ಒಂದೀಟು ಹೊಂದಿಸಿ ಕೊಡುತಿದ್ವಿ. ಮೂರು ಪುಸ್ತಕಗಳು ಪ್ರಿಂಟಿಗೆ ಕಳಿಸಿದ್ರು. ಒಂದನೇದ್ದು